

"ಅಯ್ಯೋ ಇವರು ಹೋದಾಗದಲ್ಲೋ..." ಎಂಬ ಕಮಲಾಬಾಯಿಯ ಆಕ್ರಂದನದಲ್ಲಿ ದೊಡ್ಡ ಅಳುವಿತ್ತು. ಅನತಿ ದೂರದಲ್ಲಿ ಮಲಗಿದ್ದ ಗೋಪಾಲಿ ಎದ್ದು ಬಂದು ತಂದೆಯ ದೇಹವನ್ನು ಮುಟ್ಟಿ ನೋಡಿದ. ಬಹುಶಃ ಮೂರು ಗಂಟೆಯ ಹೊತ್ತಿಗೆ ಅವನ ತಂದೆ ಕಪಿನಿಪತಿರಾಯರು ತೀರಿಕೊಂಡಿದ್ದಿರಬೇಕು. ಮೈ ಕೊರಡಾಗಿತ್ತು. ಆ ಮನೆಗೆ ಗೋಪಾಲಿ ಹಿರಿಯ ಮಗ. ಚಟ್ಟ ಕಟ್ಟಲು ಅನುವಾದ. ಸ್ಮಾರ್ತ ಬ್ರಾಹ್ಮಣರು ಬಂದು ಅಂಗಳದಲ್ಲಿ ನೆರೆದರು. ಗೋಪಾಲಿಯ ಹೆಂಡತಿ ಜ್ಯೋತಿ ಮೂಲೆಯಲ್ಲಿ ನಿಂತು ಸಣ್ಣ ದನಿಯಲ್ಲಿ ಅಳುತ್ತಿದ್ದಳು.

"ಈ ಸಾರಸ್ವತ ರಂಡೇನ ತರ್‌ಬ್ಯಾಡ್ರಿ ಅಂತ ಸಾವ್ರ ಸಲ ಹೇಳಿದೆ. ಬಂದಿನ್ನು ಆರ್ ತಿಂಗಳು ಆಗಿಲ್ಲ, ಮನಿ ಯಜಮಾನ್‌ನ ನುಂಗಿದ್ಲು. ಅರವತ್ ವರ್ಷಕ್ಕೆ ಕುಂಕುಮ ಕಳ್ಕೊಂಡೆ. ಸಾಯೋವಂತದೇನಾಗಿತ್ತು. ಎಷ್ಟೇ ಕೈ ಕಾಲ್ ನಡುಗಿದ್ರು ಮನಿಕಡಿ ಬ್ಯಾಸ... ಗೋಪಾಲಿ ಗೋಪಾಲಿ ಗೋಪಾಲಿ... ರಿಟೈರ್‌ಡ್ ಆದಾಗಿನಿಂದ ಇವತ್ತಿನ ತನಕ ಒಂದು ದಿನ ಸುಮ್ಮನೆ ಕೂತೋರಲ್ಲ. ಭಂಡಾರ ಸೇಠ್‌ನ ಅಂಗಡಿಗೆ ಹೋಗಿ ಲೆಕ್ಕ ಬರೆಯೋದೇನಿತ್ತು. ನಿಮಗ ಪಾರ್ಕಿನ್‌ಸನ್ ಆಗ್ಲಿಕ ಹತ್ಯದ ಕೆಲಸಕ್ ಹೋಗ್‌ಬ್ಯಾಡ್ರಿ ಅಂತ ದೇಸಾಯಿ ಡಾಕ್ಟ್ರು ಮೇಲಿಂದ ಮೇಲೆ ಹೇಳುತ್ತಿದ್ದರು. ಸುಮ್ಮನೆ ಕೂಡೋ ಜೀವ ಅಲ್ಲ. ಹೆಣ್ಮಕ್ಕಳು ಅಂದ್ರೆ ಜೀವ. ಮೊಮ್ಮಕ್ಕಳ್ನ ತಾವೇ ಸಾಲಿಗೆ ಬಿಟ್ ಬರೋರು. ಗೋಪಾಲಿ, ನನ್ನ ಇನ್ನು ಯಾರ್ ನೋಡ್ತಾರೋ. ಆ ದೇವರು ನನ್ನೂ ಕರಕ್ಕೊಂಡ್ ಬಿಟ್ರೆ ಒಳ್ಳೇದು. ನಲವತ್ತೈದು ವರ್ಷ ಕೂಡೇ ಇದ್ವಿ. ಒಂದು ಮಾತ್ ಹೇಳಿಲ್ಲ, ಹೋಗ್‌ಬಿಟ್ರು. ರೋಡ್‌ಗಿಳಿದ್ರೆ ರಂಡೇ ಅಂತಾರೆ. ಗಂಡ ಕೈಬಿಟ್ ಹೋದ್ಮೇಲೆ, ಕುಂಕುಮ ಕೆಟ್ ಹೋದ್ಮೇಲೆ ಏನಿದ್ರೆ ಏನ್. ಗೋಪಾಲಿ ನನ್ನದೂ ಚಟ್ಟ ಕಟ್ಟಿಸಿಬಿಡಪ್ಪ. ನನ್ ಒಲ್ಯೋನೋ ಯಾಕಾರ ಬದುಕಿರ್‌ಲಿ" ಅಂದವಳೇ ಗೋಪಾಲಿಯ ತಾಯಿ ಘಳ ಘಳ ಘಳನೆ ಗಾಜು ನೆಲಕ್ಕೆ ಬಡಿದು ಮುರಿದುಕೊಂಡಳು.

ದಿಕ್ಕು ತೋಚದಂತಾದ ಗೋಪಾಲಿ ಸುಮ್ಮನೆ ಬಂದು ತಾಯಿಯ ಪಕ್ಕದಲ್ಲಿ ನಿಂತು ಬೆನ್ನು ಸವರಿದ. ಅವನು ಮುಟ್ಟಿದ್ದೇ ತಡ ತಾಯಿ ನೆಲಕ್ಕೆ ಬಿದ್ದುಹೊರಳಿ ಅತ್ತಳು. "ಬ್ಯಾಡ್‌ವೋ ನನಗಿನ್ನು ಈ ಜೀವ ಬ್ಯಾಡ. ನೀವೆಲ್ಲ ಇದ್ದೀರಿ ಖರೆ, ಅವ್ರೇ ಇಲ್ಲದ ಮ್ಯಾಲೆ ನನಗ ಯಾರಿದ್ರ ಏನು? ಅಂಗಳದಾಗಿನ ಮರ ಮುರುದು ಬಿದ್ದಾಗಾಯ್ತು. ಭಣ ಭಣ ಮಧ್ಯಾಹ್ನ. ನನಗಿನ್ನು ಯಾರಿದಾರೋ ಗೋಪಾಲಿ?"